
## ಹಣ್ಣಿನ ಜಡೆ ಅಲಂಕಾರ

ಮಲ್ಲಿಗೆ, ಗುಲಾಬಿ ಹೂಗಳಿಂದ ಮೊಗ್ಗಿನ ಜಡೆ ಹಾಕಿ ಹೆಣ್ಣು ಮಕ್ಕಳನ್ನು ಅಲಂಕರಿಸಿ ಫೋಟೊ ತೆಗೆಸುತ್ತಾರೆ. ಆ ಮಗು ಒಂದು ರೀತಿಯಲ್ಲಿ ಮದುವೆಗೆ ಅಣಿಯಾದ ಮದುವಣಗಿತ್ತಿಯಂತೆಯೋ, ಸೀಮಂತ ಸಿಂಗಾರಗೊಂಡ ಮಹಿಳೆಯಂತೆಯೋ ಕಾಣಿಸುತ್ತಿರುತ್ತಾಳೆ. ಅಂತೆಯೇ ಮನೆ ದೇವರ ವಿಗ್ರಹಕ್ಕೂ ಈ ರೀತಿ ಅಲಂಕರಿಸಿ ಸಂತೋಷಪಡುವುದೂ ಇದೆ.

ಇಲ್ಲಿ ಮಹಿಳೆಯೊಬ್ಬರು ಮಲ್ಲಿಗೆ, ಕನಕಾಂಬರ ಮಾತ್ರ ಅಲ್ಲವೆ ಗೋಡಂಬಿ, ದ್ರಾಕ್ಷಿ, ಬಾದಾಮಿ, ಖರ್ಜೂರ ಸೇರಿದಂತೆ ಹಲವು ಹಣ್ಣುಗಳನ್ನು ಜಡೆಗೆ ಜೋಡಿಸಿ ಅಲಂಕರಿಸಿ ಕೇಶ ವಿನ್ಯಾಸ ಮಾಡಿರುವುದನ್ನು ಭಾವಚಿತ್ರದಲ್ಲಿ ನೋಡಬಹುದು.

—ಲಕ್ಷ್ಮಣ್ ಶೆಣೈ ಎಸ್.





—[ ಶ್ರೀ ಸಿದ್ಧೇಶ್ವರ ಪ್ರಸನ್ನ ]—

# ಹೋರಿಗಳ ಜಾತ್ರೆ

ಸೂಳೇಕೆರೆ.

ಚನ್ನಗಿರಿ ತಾಲ್ಲೂಕು ಸೂಳೇಕೆರೆಯಲ್ಲಿ ಮಾಮೂಲು ಪ್ರಕಾರ ಶ್ರೀ ಸಿದ್ಧೇಶ್ವರ ಸ್ವಾಮಿಯ ರಥೋತ್ಸವವು ಚಿತ್ರಭಾನು ಸಂವತ್ಸರದ ಫಾಲ್ಗುಣ ಶುದ್ಧ ಬಿದಿಗಿ ತಾ|| **8-3-43** ನೆ ಸೋಮವಾರವು. ತಾ|| **9-3-43** ನೆ ಮಂಗಳವಾರ ಕಾರ್ಣಿಕವು ಸಹ ಇದಾದ **8** ದಿನಗಳವರವಿಗೂ ಕೆರೆ ಕೋಡಿ ಬಳಿ **7** ನೆ ವರ್ಷದ ಹೋರಿಗಳ ಜಾತ್ರೆಯು ನಡೆಯುತ್ತೆ.

ಜನಜಾನುವಾರುಗಳಿಗೆ ನೀರು ಮತ್ತು ನೆರಳಿನ ಸೌಕರ್ಯವು ಚನ್ನಾಗಿರುತ್ತದೆ. ಜಾತ್ರೆಗೆ ಬರುವ ರಾಸು **1** ಕ್ಕೆ **0-1-0** ಯಂತೆ ಸುಂಕಹಾಕಲ್ಪಡುತ್ತೆ.

ಉತ್ತಮವಾದ ರಾಸುಗಳಿಗೆ ಬಹುಮಾನ ಹಂಚಲ್ಪಡುತ್ತೆ.

**ಕ್ಯಾಟಲ್‌ಷೋ ಕಮಿಟಿ,**
**ಸೂಳೇಕೆರೆ.**

ದೀಕ್ಷಿತ್ ಪ್ರೆಸ್, ದಾವಣಗೆರೆ.

## ಸ್ವಾತಂತ್ರ್ಯ ಪೂರ್ವದ ಕರಪತ್ರ

ದಕ್ಷಿಣ ಭಾರತದದಲ್ಲೇ ಎರಡನೇ ಅತಿ ದೊಡ್ಡಕೆರೆ ಎಂಬ ಅಗ್ಗಳಿಕೆ ಸೂಳೆಕೆರೆಗೆ ಇದೆ. ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಸೂಳೆಕೆರೆಯ ದಡದಲ್ಲಿ ಸಿದ್ದೇಶ್ವರಸ್ವಾಮಿ ದೇವಾಲಯವಿದೆ. ಇಲ್ಲಿ ಪ್ರತಿವರ್ಷ ಜಾತ್ರೆ ನಡೆಯುತ್ತದೆ. ಮೊದಲೆಲ್ಲ ಜಾತ್ರೆ ಪ್ರಯುಕ್ತ ಹೋರಿಗಳ ಜಾತ್ರೆಯೂ ಒಂದು ವಾರ ನಡೆಯುತ್ತಿತ್ತು. ಹೋರಿಗಳ ಜಾತ್ರೆ ಆ ಕಾಲದಲ್ಲಿ ತುಂಬ ಪ್ರಸಿದ್ಧಿಯಾಗಿತ್ತು. ರಾಜ್ಯದ ವಿವಿಧ ಪ್ರದೇಶಗಳಿಂದ ಹೋರಿಗಳನ್ನು ಕೊಳ್ಳುವವರು ಹಾಗೂ ಮಾರುವವರು ಬರುತ್ತಿದ್ದರು. ಸಾವಿರಾರು ಹೋರಿಗಳು ಇಲ್ಲಿಗೆ ಬರುತ್ತಿದ್ದವು. ಆಗ ಜಾತ್ರೆಗೆ ಬರುವ ರಾಸುಗಳಿಗೆ ಒಂದು ಆಣೆ ಸುಂಕ ವಿಧಿಸಲಾಗುತ್ತಿತ್ತು. ಅಲ್ಲದೆ ಉತ್ತಮ ರಾಸುಗಳಿಗೆ ಬಹುಮಾನ ಕೂಡ ಇರುತ್ತಿತ್ತು. ಆದರೆ ಇಂದು ಹೋರಿಗಳ ಜಾತ್ರೆ ನಡೆಯುತ್ತಿಲ್ಲ. 1943ರಲ್ಲಿ ನಡೆದ ಹೋರಿಗಳ ಜಾತ್ರೆಯ ಕರಪತ್ರ ನಮ್ಮ ಮಾವನವರ ತಂದೆಯ ಹಳೆಯ ಪುಸ್ತಕದಲ್ಲಿ ಸಿಕ್ಕಿದೆ.

—ಎಸ್.ಎನ್. ಸೌಮ್ಯ, ಶಿವಮೊಗ್ಗ

## ಮನಮೋಹಕ ನಿಪ್ಲಿ ಫಾಲ್ಸ್

ಉತ್ತರ ಕನ್ನಡ ಜಿಲ್ಲೆಯನ್ನು ಜಲಪಾತಗಳ ಜಿಲ್ಲೆ ಎಂದೇ ಕರೆಯುತ್ತಾರೆ . ಹೆಜ್ಜೆ ಹೆಜ್ಜೆಗೆಲ್ಲ ಎದುರಾಗುವ ಜಲಪಾತಗಳು ಮಳೆಗಾಲದಲ್ಲಿ ಮೈದುಂಬಿಕೊಂಡು ತಮ್ಮ ಚೆಲುವನ್ನು ಹೊರಹೊಮ್ಮಿಸುತ್ತವೆ. ಒಂದಕ್ಕಿಂತ ಮತ್ತೊಂದು ಕಣ್ಮನ ಸೆಳೆಯುತ್ತವೆ.

ಉತ್ತರಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕು ಹಲಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಿಪ್ಲಿ ಜಲಪಾತ ಒಂದಿದೆ. ಇದು ಮಳೆಗಾಲದದಲ್ಲಿ ಬಹು ಆಕರ್ಷಣೀಯವಾಗಿ ಕಂಗೊಳಿಸುತ್ತದೆ. ಮಳೆಗಾಲ ಆರಂಭವಾಗಿ ಸುಮಾರು ಮೂರು ನಾಲ್ಕು ತಿಂಗಳು ಈ ಜಲಪಾತದ ವೈಭವವನ್ನು ಸವಿಯಬಹುದು. ವಿಸ್ತಾರವಾಗಿ ಹರಿದು ಬರುವ ನೀರು ಅದೇ ಧಾಟಿಯಲ್ಲಿ ಸುಮಾರು ಹತ್ತು ಅಡಿಗಳಷ್ಟು ಕೆಳಕ್ಕೆ ಕಲ್ಲಿನ ರಾಶಿಯ ಮೇಲೆ ಧುಮುಕುತ್ತದೆ. ಹೀಗೆ



ಧುಮುಕುವಾಗ ಬಿಳಿನೊರೆಗಳ ಚೆಲುವು ನಮ್ಮನ್ನು ಪುಳಕಗೊಳಿಸುತ್ತದೆ. ಮುಂದೆ ಈ ಜಲರಾಶಿ ವರದಾ ನದಿಗೆ ಸೇರಿಕೊಳ್ಳುತ್ತದೆ. ಪ್ರವಾಸಿಗರು ಜೋಗ ಜಲಪಾತಕ್ಕೆ ಹೋಗುವಾಗ ಇಲ್ಲಿಗೂ ಭೇಟಿ ನೀಡಿ ಇದರ ಸೊಬಗನ್ನು ಸವಿಯಬಹುದು.

—ಗಣಪತಿ ಶಿರಳಗಿ, ಸಾಗರ